ಬೀಜ ಹುಟ್ಟುತ್ತದೆ ಎಂಬ ನಂಬಿಕೆ ಇಲ್ಲ. ಹುಟ್ಟಿದರೂ ಕೂಡ crop ಬರುತ್ತದೆ ಎನ್ನುವ guarantee ಇಲ್ಲ. ಅವರನ್ನು ನಿಯಂತ್ರಣ ಮಾಡುವುದಕ್ಕೆ ಇವತ್ತು ಏನು ದಾರಿ ಇದೆ ? ಹಾಸನ ಭಾಗದಲ್ಲಿ ಆಲೂಗಡ್ಡೆ ಬೀಜ ಬಿತ್ತನೆ ಮಾಡಿದ್ದಾರೆ, ಗೆಡ್ಡೆಯೇ ಒಡೆದಿಲ್ಲ, ಬರೀ ಹಸಿರು ಮಾತ್ರ ಇದೆ. ಗಿಡ ಬೆಳೆದಿದೆ, ಅದರ ಕೆಳಗಡೆ ಗೆಡ್ಡೆ ಕಟ್ಟುತ್ತಾ ಇಲ್ಲ. ಅದರಲ್ಲಿ ಬೀಜದ್ದೇ ದೋಷ. ಹೀಗೆ ದೋಷಪೂರಿತವಾಗಿರತಕ್ಕಂಥ ಬೀಜವನ್ನು ಸರಬರಾಜು ಮಾಡುವವರ ಮೇಲೆ ಎಷ್ಟು ಜನರ ಮೇಲೆ ಕ್ರಮ ಕೈಗೊಂಡಿದ್ದೇವೆ ? ಲಕ್ಷಾಂತರ ಜನರ ಬದುಕಿನ ಜೊತೆಗೆ ಅವರು ಆಟವಾಡುತ್ತಿದ್ದಾರೆ. ಅಂಥ ಎಷ್ಟು ಜನರ ಮೇಲೆ ನಾವು ಕ್ರಮ ಕೈಗೊಂಡಿದ್ದೇವೆ ? ಅವರಲ್ಲಿ ಎಷ್ಟು ಜನರನ್ನು ಜೈಲಿಗೆ ಕಳುಹಿಸಿದ್ದೇವೆ ? ಬೀಜ ಉತ್ಪಾದಕ ಕಂಪನಿಯ ಮೋಸದಿಂದ ಆಗಿರುವಂಥ ನಷ್ಟಕ್ಕೆ ಎಷ್ಟು ಜನ ರೈತರಿಗೆ ಪರಿಹಾರವನ್ನು ಒದಗಿಸಿಕೊಟ್ಟಿದ್ದೇವೆ ? ಈ ರೀತಿ ದುರ್ಬಲವಾಗಿರುವಂಥ ಕಾನೂನುಗಳಿವೆ. ಆ ಕಾನೂನನ್ನು ರೈತನ ಪರವಾಗಿ, ರೈತರ ಹಿತರಕ್ಷಣೆ ಮಾಡುವ ಸಲುವಾಗಿ ಬದಲಾಯಿಸಬೇಕಾದಂಥ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಯೋಚನೆ ಮಾಡಬೇಕು. ವಿಷಮುಕ್ತ ಆಹಾರವನ್ನು ಬೆಳೆಯುವುದಕ್ಕೆ, ವಿಷಮುಕ್ತ ಆಹಾರದಿಂದ ಅನುಭವಿಸುತ್ತಿರತಕ್ಕಂಥ ಎಲ್ಲರಿಗೂ ಆಗುತ್ತಿರುವಂಥ side effects ಏನಿದೆ, ಅದನ್ನು control ಮಾಡುವುದಕ್ಕೆ ನಮ್ಮ ಕೃಷಿ ವಿಶ್ವವಿದ್ಯಾನಿಲಯಗಳು, ಕೃಷಿ ವಿಜ್ಞಾನಿಗಳು ಪರಿಸರ ಸ್ನೇಹಿಯಾಗಿ, ರೈತ ಸ್ನೇಹಿಯಾಗಿ ಸಂಶೋಧನೆ ಮಾಡಿ ಆ ಸಂಶೋಧನೆ ಜನರಿಗೆ ಸುಲಭದಲ್ಲಿ ನಿಲುಕುವಂತಾಗಬೇಕು. ಮತ್ತು ಆ ಸಂಶೋಧನೆಗಳು ಇನ್ನಾವುದೋ ಒಂದು ಕಂಪನಿಯ product ಗಳನ್ನು sale ಮಾಡುವುದಕ್ಕೆ ಅನುಕೂಲವಾಗುವಂಥದ್ದು ಆಗಬಾರದು. ಆ ನಿಟ್ಟಿನಲ್ಲಿ ಯೋಚಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು, : ಬೇಡಿಕೆ ಮೇಲಿನ ಚರ್ಚೆ ನಾಳೆ ಮುಂದುವರಿಯುತ್ತದೆ. ಈಗ ಗಮನ ಸೆಳೆಯುವ ಸೂಚನೆಗಳು.

7. ಗಮನ ಸೆಳೆಯುವ ಸೂಚನೆಗಳು

1. ವಿಷಯ : ಕೊಡಗು ಜಿಲ್ಲೆಯಲ್ಲಿ ಜಮ್ಮಾ ಹಿಡುವಳಿದಾರರಿಗೆ ಭಾರತೀಯ ಶಸ್ತ್ರಾಸ್ತ್ರ ಕಾಯ್ದೆಯಡಿ ಕೋವಿ ತೆಗೆದುಕೊಳ್ಳಲು ವಿನಾಯಿತಿ ಪತ್ರವನ್ನು ನೀಡದಿರುವ ಬಗ್ಗೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ ಜಮ್ಮಾ ಹಿಡುವಳಿದಾರರಿಗೆ ಭಾರತೀಯ ಶಸ್ತ್ರಾಸ್ತ್ರ ಕಾಯ್ದೆಯಡಿ ಕೋವಿ ತೆಗೆದುಕೊಳ್ಳಲು ವಿನಾಯಿತಿ ಪತ್ರವನ್ನು ನೀಡದಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸಳೆಯುತ್ತೇನೆ.

ಶ್ರೀ ಕೆ.ಜೆ. ಜಾರ್ಜ್(ಗೃಹ ಸಚಿವರು) : ಮಾನ್ಯ ಅಧ್ಯಕ್ಷತರೆ,

ಭಾರತ ಸರ್ಕಾರ ಗೆಜೆಟ್ ನೋಟಿಫಿಕೇಶನ್ ಸಂಖ್ಯೆ : F : 15 : 13 :59(6)–P.IV, ದಿನಾಂಕ : 13–07–1962 (ಜಿ.ಎಸ್.ಆರ್. ನಂ. 993) ಮತ್ತು ಸರ್ಕಾರದ ಚಾಲ್ತಿ ಆದೇಶ ಸಂಖ್ಯೆ : 1920, ದಿನಾಂಕ : 06–07–1963ರಂತೆ ಕೊಡಗು ಜಿಲ್ಲೆಯಲ್ಲಿ ಜಮ್ಮಾ ಹಿಡುವಳಿದಾರರಿಗೆ ಮತ್ತು ಕೊಡಗಿನ ಮೂಲ ನಿವಾಸಿಗಳಿಗೆ ವಿನಾಯಿತಿ ದೃಢೀಕರಣ ಪತ್ರ (Exemption Certificate) ನೀಡಲಾಗುತ್ತಿದೆ. ವಿನಾಯಿತಿ ದೃಢೀಕರಣ ಪತ್ರಕ್ಕಾಗಿ (Exemption Certificate) ನಿಯಮಾನುಸಾರ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಿರುವ ಯಾವುದೇ ಅರ್ಜಿಗಳನ್ನು ಈ ಕಛೇರಿಯಲ್ಲಿ ಇಲ್ಲಿಯವರೆಗೆ ತಿರಸ್ಕರಿಸಲಾಗಿರುವುದಿಲ್ಲ.

ಜಮ್ಮಾ ಭೂಮಿ ಹೊಂದಿರುವ ಬಗ್ಗೆ ಮತ್ತು ಕೊಡಗಿನ ಮೂಲ ನಿವಾಸಿ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದಕ್ಕೆ ಅಗತ್ಯವಿರುವ ದಾಖಲೆಗಳನ್ನು ಮಾತ್ರ ಅರ್ಜಿದಾರರು ಅರ್ಜಿಯೊಂದಿಗೆ ಸಲ್ಲಿಸಬೇಕಾಗಿರುತ್ತದೆ.

IMPORTANT NOTIFICATIONS OF THE CENTRAL GOVERNMENT UNDER THE ARMS ACT, 1959

G.S.R. 958, dated the 13th July, 1962.-In exercise of the powers conferred by sub-clause (vii) of Cl. (b) of sub-section (1) of Sec. 2 of the Arms Act, 1959 (54 of 1959), the Central Government hereby specifies the following as ingredients of ammunition, namely :

(i) lead, sulphur, saltpetre and sodium oxide ;

(ii) chlorates and perchlorates ;

(iii) fissionable material ; and

(iv) asphyxiation, poisionous, irritant or other gases and analogous liquid, materials or devices are not used in any bona fide industrial process in India.

[No. 15/13/59/(II)-P.IV.]

G.S.R. 989, dated the 13th July, 1962.-In exercise of the powers conferred by Cl. (i) of sub-section (1) of Sec. 2 of the Arms Act, 1959 (54 of 1959), the Central Government hereby specifies the following arms as prohibited arms in addition to those mentioned in that clause, namely :

Hand grenades, riot pistols, fire-arms for discharging projectiles by atomic energy, cannon, mortars and other ordnance and in machine-guns, all carriages accessiories and appliances for mounting, transporting and serving the same.

[No. 15/13/59/(III)-P.IV.]

G.S.R. 990, dated the 13th July, 1962.-In exercise of the powers conferred by Cl. (h) of sub-section(1) of Sec. 2 of the arms Act, 1959 (54 of 1959), the Central Government hereby specifies the following articles as prohibited ammunition in addition to those mentioned in that clause, namely :

Ammunition for any of the prohibited arms, articles designed for land mining and ammunition containing or designed or adapted to contain any-fissionable material or any noxious liquid gas or other such thing.

[No. 15/13/59/(VI)-P.IV.]

G.S.R. 991, dated the 13th July, 1962. Whereas the Central Government is of opinon that it is necessary and expedient in the public mterest to exempt certain persons or classes of persons and exclude certain descriptions of arms and ammunation from the speration of all or some of the provisions of the Arms Act, 1959 (54 of 1959),

Now, therefore, in exercise of the powers conferred by Sec. 41 of that Act, the Central Government hereby-

(i) exempts the persons or classes of persons specified in Col. (1) of Sch. I hereto annexed, in respect of the arms and ammunition of the category or description specified in Col. (2) thereof, when carried or possessed (save where otherwise expressly stated) for their own personal use, from the operation of such of the provisions of the said Act and subject to such conditions as are mentioned in Cols. (3) and (4), respectively of that schedule ;

(ii) excludes the arms and ammunition of the description specified in Col. (1) of Sch. II hereto annexed from such the provisions of the said Act and subject To such Conditions as are meationed in Col (2) and Col (3) respectively of that schedule.

PROVIDED THAT the exemption hereby granted shall be subject to the following further conditions, namely :

(a) It shall not be deemed to render lawful the import of arms or ammunition through the medium of post office ;

(b) the persons or classes of persons exempted shall-

(i) unless specifically exempted by the Central Government by notification in the Official Gazette, register in such manner and at such place as the Central Government may prescribe from time to time, any fire arms or ammunition in respect of which the exemption has been granted ;

(ii) render such statistical information about different descriptions of arms and ammunition in respect or which the exemption has been granted in such pro forma, if any, as may be required by the Central Government ;

(iii) whenever any arm or ammunition in respect of which exemption is granted is lost or stolen, forthwith report the occurrence of such loss or theft together with the details of the articles lost or stolen at the nearest Police Station.

SCHEDULE -1

PERSONS EXEMPTED

PERSONS OR CLASSES OF PERSONS	CATEGORIES/ DESCRIPTION OF ARMS AND AMMUNITION	PROVISIONS OF THE ACT	CONDITIONS
1	2	3	4
1.[a] President of India ; Governor of a State or in the case of the State of Jammu and Kashmir, the sadare-Riyasal, Lt. Governors or Chief Commissioners of Union Territories	All except 1[a]	Those contained in Secs. 3 and 4.	
2. [a] Ruler of Indian State having salute of guns	Saluting cannon 1[b] and 1[c] provided that such arms and ammunition have been lawfully imported into India, III, IV, V and VI.	Those contained in Secs. 3 and 4.	The exemption shall apply to the saluting cannon belonging to the Ruler, subject to the conditions that- [i] the cannon shall be so reconditioned as to restrict their use or application to the firing of salutes ;

1	2	3	4
			[ii] no cannon shall be sold or exported outside the State in which the Ruler ordinarily resides ; and [iii] the cannon shall be made available for firing of salutes on ceremontal occusions in the State when firing of such salutes is neccessary under any law, usage or custom for the time being in force.
(b) A legitimate son of such ruler who is not less than 16 years of age and has been nominated by such Ruler.	1(b) and (c), provided that such arms or ammunition have been lawfully imported into India; III, IV, V and VI.	Those contained in Secs. 3 and 4.	
[c] Aides0de-camp and/or personal bodyguards of such Ruler.	1[b] and 1[c], provided that such arms or ammunition hav been lawfully imported into India; III, IV, V and VI.	Those contained in Secs. 3 and 4.	The exemption shall apply only to the arms and ammunition belonging to the Ruler and corried by such aides-de-camp or personal bodyguards.

1	2	3	4
(d) Servants of such Ruler, when carrying arms for and not accompanying the Ruler.	Saluting cannon 1(b) and 1(c) provided that such arms and ammunition have been lawfully imported into India, III, IV, V and VI.	Those contained in Secs. 3 and 4.	The exemption shall apply only to the arms and ammunition belonging to the Ruler and carried by such servants and shall be subject to the conditions that- (i) the number of servants entitled to the exemption in the case of each such Ruler shall not exceed 4 ; and (ii) their names shall have been specified in a general authorization to any such Ruler issued by the State Government or by the i.t. Governor or Chief Commissioner in a Union Territory.
3. (a) Ruler of Indian State not having a salute of guns.	1(b) and 1(c), provided that such arms and ammunition have been lawfully imported into India, III, IV, V and VI.	Those contained in Secs. 3 and 4.	This exemption shall be subject to such conditions (if any) as may be prescribed by the Central Government and may, where necessary, be of a general nature dispensing with the

1	2	3	4
			neccessity of a fresl order on each occa sion. The exemption i: respect of the salut ing cannon belong ing to the Rule shall be subject t· the caondition that- [i] the cannon shal be so reconditione· as to restrict thei use of application t· the firing of salutes [ii] no cannon sha: be sold or exporte· outside the State i: whch the Ruler or dinarily resides and [iii] the canno: shall be made avail able for the firin: salutes on ceremo nial occasions o the State, when fir ing of such salute is necessary unde any law, usage o custom for the tim· belong in force.

[b] Aides-de-camp and/or personal body-guards of the Ruler of an Indian State, not having a salute of guns.	1[b] and 1[c] provided that such arms and ammunition have been lowfully imported into India, III, IV, V and VI.	tained In Secs. 3 and 4.	The aldes-de-camp and/or personal bodyguard entided to the exempion shall not exceed such numbers as the Central Government may, from time to time, specify. The exeation shll apply only to the arms and ammunition belonging to the Ruler and carried by such aides-de-camp or personal body-guards.
Saluting cannon	Those con-		
[c] Such members of the family of an Indian State as may be specified by the Central Government.	vided that such arms and ammunition have been lawfully imported into Indian, III, IV, V and VI.	Those contained in Secs. 3 and 4.	This exemption shall apply to scuh numbers of the arms and ammunition of the categories shown in Col. 2 and be subject to such conditions [if any], as may be prescribed by the Central Government and may, where necssary, be of a general nature dispensing with the necessity of a fresh order or each occasion.
1[b] and 1[c] pro-			
4. His Exalted Highness the Nizum of Hyderabad and the Prince of Arcot.	Saluting cannon 1[b] and 1[c] provided that such arms and ammunition have been lawfully imported into India, III, IV, V and VI.	Thosde contained in Secs. 3 and 4.	The exemption shall be subject to- [i] the order of the Central Government regarding the number of retained and the

1	2	3	4
			quantity and descption of arms and ammunition to be perraited, and the purposes for whch such arms may be carried and (ii) the annual registred of the retainers an weapons exempted.
5. The Officer Commanding unit of the armed forces or of the Territorial Army and when he is in possession of a pass granted and ausigned by his Officer Commanding, every having member of the armed force.	Such arms and ammunition as are provided for sporting purposes by Government or from a regimental fund under the authority or the Officer Commanding the Unit.	Those contained in Secs. 3 and 4.	The exemption shall apply the case of all serving member of the armed forces only respect of the arms an ammunition and to the are and for the dates spection the pass in the case oi Officer Commanding, only in respect the purchase and stocking arms and ammunition when are provided for sport purposes by Government from a regimental fund.
6. A member of a rifie club/association approved by the Central			

1	2	3	4
Government, when engaged as such member in connection with target practice of shooting competition.	Arms and ammunition in respect of which the club/association holds licence in Form VI.	Those contined in Secs. 3 and 7(a).	Those exemptions shall apply when the arms or ammunition are intended to the taken out the premises of the club/association only if he possess a pass signed by the Presidend Secretary of the club association and then only respect of the arms ammunition and in the are and for the dates specified the pass ; and when the arms ammunition are intended to taken out of the district, I pass shall be alleasted by a Class magestate or Justice the Peace.

New Delhi, thge 6th July, 1963

S.O. 1920 Whereas the Central Government is of opinion that it is necessary and expedient in the public interest to exempt certain classes of persons from the operation of some of the provisions of the Arms Act 1959 [54 of 1959]

Now, therefore, in exercise of the powers conferred by section 41 of that Act, the Central Government hereby exempts the classes of persons specified in column 1 of Schedule 1 here to annexed, in respect of the arms and ammunition of the category or description specified in column 2 thereof when carried or possessed for their own personal use, from the operation of such of the provisions of the said Act and subject to such conditions as are mentioned in column 3 and 4 respectively of that Schedule.

Provided that the exemption hereby granted shall be subject to the following furthere conditions, namely :-

(a) It shall be valid for a period ending 31st May, 1965.

(b) It shall not be deemed to render lawful the import of arms or ammunition through the medium of post office ;

(c) the classes of persons exempted shall-

(i) unless specifically exempted by the Central Gvoernment by notification in the Offical Gazette, register in such manner and at such place as the Central Government may prescribe from time to time, any fire-arm or ammunition in respect of which the exemption has been granted ;

(ii) render such statistical information about different description of arms and ammunition in respect of which the exemption has been granted in such proforma, if any, as may e required by the Central Government ;

(iii) whenever any arm or ammunition in respect of which exemption has been granted is stolen, forthwith report the occurrence of such loss or theit together with the dotails of the articles lost or stolen at the nearest police station.

SCHEDULE

Classes of Persons	Categories/ description of arms and ammunition.	Provisions of the Act	Conditions.
1	2	3	4
Every person of Coorg race and every Jumma tenure holder in Coorg.	All except categories I and II of Schedule I to the Arms Rules, 1962	Those coutained in sections 3 and 4.	The arms or ammunition carried or possessed by any person herein exempted whilst residing or travelling outside the district of Coorg shall not exceed one rifle with 100 rounds of ammunition for

1	2	3	4
			the same and one smooth bore breech or muzzle lading gun with 500 cartridges or the equivalent in leaden shot and gunpowder.

2. In the TAble appended to the Ministry of Home Affairs Notification No. F-1513/59 (VI)-PIV. dated 13th July, 1962 [G.S.R. No. 993 published in the Gazette of India, Part-II, Section 3(i) dated the 28th July 1962]. clause (b) in column 3 against Item 7 thereof shall be delected.

[No. F. 17/4/62-P.IV.]

L.I. PARIJA DY. SECY.

ಶ್ರೀ ಕೆ.ಜಿ. ಬೋಪಯ್ಯ : ಇದೇ ವಿಷಯಕ್ಕೆ ಸಂಬಂಧಿಸಿದಂತೆ ನಾನು 3ನೇ ಬಾರಿ ಕೇಳುತ್ತಿದ್ದೇನೆ. ಕೊಡಗು ಜಿಲ್ಲಾಧಿಕಾರಿಗಳು ದಿನಾಂಕ : 26–09–2013ರಲ್ಲಿ ಒಂದು clarification ಸಂಬಂಧ ಒಂದು ಪತ್ರ ಬರೆದಿದ್ದಾರೆ. ಅವರಿಗೆ ಅದು ಏನೆಂದು ಅರ್ಥವೇ ಆಗಿಲ್ಲ. ಈ clarification letter ಗೆ ಗೃಹ ಇಲಾಖೆಯ ಕಾರ್ಯದರ್ಶಿಯವರು ಉತ್ತರ ಏಕೆ ಬರೆದಿಲ್ಲ ಎಂದು ಕೇಳುತ್ತಿದ್ದೇನೆ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಬೋಪಯ್ಯನವರು ಗಮನಸೆಳೆಯುವ ಸೂಚನೆಯಲ್ಲಿ – ಕೊಡಗು ಜಿಲ್ಲೆಯ ಜಮ್ಮಾ ಹಿಡುವಳಿದಾರರಿಗೆ ಇಂಡಿಯನ್ ಆರ್ಮ್ಸ್ ಕಾಯ್ದೆಯಡಿ ಕೋವಿ ತೆಗೆದುಕೊಳ್ಳಲು ಯಾವುದೇ ಪರವಾನಗಿ ಬೇಕಾಗಿರುವುದಿಲ್ಲ, ಆದರೆ, ಜಿಲ್ಲಾಧಿಕಾರಿಗಳು ಈ ದೃಢೀಕರಣ ಪತ್ರ (Exemption Certificate) ಕೇಳಿ ದೃಢೀಕರಣ ಪತ್ರ ಕೊಡದೇ ಅರ್ಜಿಗಳನ್ನು ತಿರಸ್ಕರಿಸಿರುವುದರ ಬಗ್ಗೆ ಸೂಕ್ತ ನಿರ್ದೇಶನ ಮಾಡುವ ಕುರಿತು ಮಾನ್ಯ ಗೃಹ ಸಚಿವರ ಗಮನ ಸೆಳೆಯಬಯಸುತ್ತೇನೆ ಎಂದು ಹೇಳಿದ್ದಾರೆ. ಈ ಆರ್ಡರ್ 1962ನೇ ಇಸವಿಯಲ್ಲಿ ಆಗಿರುವಂಥದ್ದು. ಕೊಡಗು ಜಿಲ್ಲೆಯಲ್ಲಿ ಜಮ್ಮಾ ಹಿಡುವಳಿದಾರರಿಗೆ ಮತ್ತು ಕೊಡಗಿನ ಮೂಲ ನಿವಾಸಿಗಳಿಗೆ ವಿನಾಯಿತಿ ದೃಢೀಕರಣ ಪತ್ರ ನೀಡಲಾಗುತ್ತಿದೆ. ಆ ಮೂಲ ನಿವಾಸಿಗಳಿಗೆ ಮತ್ತು ಜಮ್ಮಾ ಹಿಡುವಳಿದಾರರಿಗೆ ವಿನಾಯಿತಿ ಕೊಟ್ಟಿದ್ದೇವೆ. ಅದು

ಅವರ privileges. ಅದರಲ್ಲಿ ಯಾವುದೇ ಬದಲಾವಣೆಯನ್ನು ನಾವು ಮಾಡಲಿಲ್ಲ. ಈಗಲೂ ಸಹಿತ ನಾನು ಕೊಡಗು ಜಿಲ್ಲೆಯ ಉಸ್ತುವಾರಿ ಸಚಿವನಾಗಿದ್ದೇನೆ. ನಾನು ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇನೆ. 1962ರಲ್ಲಿ ಯಾವ ಕಾನೂನು ಇದೆ ಅದರ ಪ್ರಕಾರವಾಗಿ ಅವರಿಗೆ exemption ಕೊಟ್ಟಿದ್ದೇವೆ, ಅವರಿಗೆ ಆ license ಪಡೆದುಕೊಳ್ಳಬಹುದು.

ಶ್ರೀ ಕೆ.ಜಿ. ಬೋಪಯ್ಯ : ನಾನು ಅವರು ಬರೆದ ಪತ್ರವನ್ನು ಓದಿಬಿಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಒಂದು ನಿಮಿಷ clarification ಹೇಳಿಬಿಡುತ್ತೇನೆ. D.C. ಯವರು clarification ಬರೆದು ಆ ವಿಚಾರದಲ್ಲಿ ಹೇಳಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ : ಅವರು ಕೊಡುತ್ತಿಲ್ಲವಲ್ಲ ? ಎಷ್ಟು applications pending ಇವೆ ?

ಶ್ರೀ ಕೆ.ಜೆ. ಜಾರ್ಜ್ : ಇಲ್ಲ ಕೊಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಅವರು ಈ ರೀತಿ ಹೇಳಿದರೆ ಹೇಗೆ ? ಒಂದು ನಿಮಿಷ, ಡಿ.ಸಿ.ಯವರು ಬರೆದಿರುವ ಪತ್ರವನ್ನು ಓದಿಬಿಡುತ್ತೇನೆ. "26–09–2013 ಕೊಡಗಿನ ಮೂಲ ನಿವಾಸಿಗಳಿಗೆ ಜಮ್ಮಾ ನಿಬಂಧನೆಯ ಜಮೀನು ಹಿಡುವಳಿದಾರರಿಗೆ ಕೇಂದ್ರ ಸರ್ಕಾರದ ಆದೇಶ ಸಂಖ್ಯೆ : so and so 1963ರ ಕೋವಿ ಪರವಾನಿಗೆ ಹೊಂದಲು ನೀಡುತ್ತಿರುವ ವಿನಾಯಿತಿ ದೃಢೀಕರಣಕ್ಕೆ ಸ್ಪಷ್ಟೀಕರಣ ಕುರಿತು : ಕೇಂದ್ರ ಸರ್ಕಾರದ standing order. ಕೊಡಗು ಜಿಲ್ಲೆಯಲ್ಲಿ ಉಲ್ಲೇಖಿದ ಕೇಂದ್ರ ಸರ್ಕಾರದ ಅಧಿಸೂಚನೆಯನ್ವಯ ಕೊಡಗಿನ ಮೂಲ ನಿವಾಸಿಗಳು ಕೊಡುವ ಜನಾಂಗ ಮತ್ತು ಜಿಲ್ಲೆಯಲ್ಲಿ ಜಮ್ಮಾ ನಿಬಂಧನೆಗೊಂಡಿರುವ ಜಮ್ಮಾ ಹಿಡುವಳಿದಾರರು ಎರಡೂ ವರ್ಗದ ಜನರಿಗೆ ಪರವಾನಗಿ ಹೊಂದಿದ್ದಲ್ಲಿ ವಿನಾಯಿತಿ ಪತ್ರವನ್ನು ನೀಡಲಾಗುತ್ತಿದೆ. ಇದನ್ನು ಲಗತ್ತಿಸಿದೆ. ಉಲ್ಲೇಖಿತ ಕೇಂದ್ರ ಸರ್ಕಾರ, ಅವರೇ ಹೇಳಿದ್ದಾರೆ, every person Coorg race and every jamma holder tenure in Coorg ಇವರಿಗೆ ಆಯುಧ ಪರವಾನಗಿ ವಿನಾಯಿತಿ ಪ್ರಸ್ತಾಪ ಇರುವುದಾಗಿದೆ. ಇವರದು

confusion ಏನೆಂದರೆ, every person Coorg race and every jamma tenure holder in Coorg ಎಂದು ಇರುವುದರಿಂದ ಈ ಎರಡು ಷರತ್ತು ಹೊಂದಿದವರಿಗೆ ಮಾತ್ರ ಕೊಡವ ಜನಾಂಗದವರಾಗಿರುವುದರ ಜೊತೆಗೆ ಅವರು ಜಮ್ಮಾ holder ಆಗಿದ್ದರೆ ಮಾತ್ರ ಕೊಡಲಿಕ್ಕೆ ಅವಕಾಶವಿದೆ ಎಂದು ಹೇಳಿ ಅವರದ್ದೇ ಆದ ರೀತಿಯಲ್ಲಿ ವ್ಯಾಖ್ಯಾನವನ್ನು ಮಾಡಿದ್ದಾರೆ. ಅಷ್ಟಕ್ಕೇ ಅವರು ಸುಮ್ಮನಾಗಲಿಲ್ಲ. ಜೊತೆಗೆ ಜಮೀನು ಹೊಂದಿದವರಿಗೆ ವಿನಾಯಿತಿ ನೀಡಲು ಅವಕಾಶ ಕಲ್ಪಿಸಲಾಗಿರುವುದೇ" ಅಥವಾ ಕೆಲವರು ಕೊಡವ ಜನಾಂಗದವರಾಗಿರುತ್ತಾರೆ, ಆದರೆ ಅವರು ಜಮ್ಮಾ ನಿಬಂಧನೆ ಭೂಮಿ ಹೊಂದಿರುವುದಿಲ್ಲ. ಹಾಗೆಯೇ ಕೆಲವರು ಜಮ್ಮಾ ನಿಬಂಧನೆ ಹಿಡುವಳಿದಾರರಾಗಿರುತ್ತಾರೆ, ಆದರೆ ಕೊಡವ ಜನಾಂಗದವರಾಗಿರುವುದಿಲ್ಲ. ಇಂಥ ಎರಡು ವರ್ಗದವರಿಗೆ ವಿನಾಯಿತಿ ನೀಡಲು ಅವಕಾಶವಿದೆ ಎನ್ನುವುದಕ್ಕೆ ಸ್ಪಷ್ಟೀಕರಣ ಮಾರ್ಗದರ್ಶನ ನೀಡಲು ಕೋರಿದೆ.

ಅಧ್ಯಕ್ಷಕರು : ಯಾರನ್ನು ಕೋರಿದೆ ?

ಶ್ರೀ ಕೆ.ಜಿ. ಬೋಪಯ್ಯ : ಪ್ರಧಾನ ಕಾರ್ಯದರ್ಶಿ, ಗೃಹ ಇಲಾಖೆಯನ್ನು ಕೋರಿದೆ.

ಅಧ್ಯಕ್ಷರು : ಇದನ್ನು ಯಾವಾಗ ಬರೆದಿದ್ದಾರೆ ?

ಶ್ರೀ ಕೆ.ಜಿ. ಬೋಪಯ್ಯ : ಇದನ್ನು ದಿನಾಂಕ : 26–09–2013ರಲ್ಲಿ ಬರೆದಿದ್ದಾರೆ. ಇನ್ನೊಂದು ತಮಾಷೆಯ ವಿಷಯ ಇದೆ.

ಅಲ್ಲದೆ ಜಮ್ಮಾ ನಿಬಂಧನೆಯ ಜಮೀನಿನ RTC ಯಲ್ಲಿ ಬಹಳ ಕಡಿಮೆ ವಿಸ್ತೀರ್ಣವಿದ್ದು ಭೂ ಮಾಲೀಕರು ಬಹಳ ಜನರು ಇರುತ್ತಾರೆ. ಇವರೆಲ್ಲರೂ ಅರ್ಜಿ ಸಲ್ಲಿಸಿದ್ದಲ್ಲಿ ವಿನಾಯಿತಿ ದೃಢೀಕರಣ ಪತ್ರ ಮಂಜೂರು ಮಾಡಬಹುದೇ ಹಾಗೂ ವಿನಾಯಿತಿ ಪತ್ರದಡಿ ಹೊರ ರಾಜ್ಯದಿಂದ ಬಂದೂಕು ಖರೀದಿಸಲು NOC ಯ ಬಗ್ಗೆಯೂ ಮಾರ್ಗದರ್ಶನ ನೀಡಲ್ಪಟ್ಟಿದೆ. ಈ ಜಮ್ಮಾ ಭೂಮಿ ಏನು ನಾಯಿಗಳೆಲ್ಲಾ ಮರಿ ಹಾಕಿದ ಹಾಗೆ ದೊಡ್ಡದಾಗುತ್ತದೆಯೇ ? ಎಂಥ ಅಧಿಕಾರಿಗಳನ್ನು

ಇಟ್ಟುಕೊಂಡಿದ್ದೀರಿ? ನಿಮ್ಮ ಪ್ರಧಾನ ಕಾರ್ಯದರ್ಶಿ ಈ ಮೊದಲು ಅಲ್ಲಿಯೂ DC ಆಗಿದ್ದರು. ಅವರಿಗೊಂದು clarification ಬರೆಯುವುದಕ್ಕಾಗಿಲ್ಲ. ಇದು ಬಹಳ ಸ್ಪಷ್ಟತೆ ಇದೆ : ಜಮ್ಮಾ exemption certificate ಸಿಗಬೇಕಾದರೆ, either he must be Coorg by race or jamma holder, ಇಷ್ಟು clear ಇರುವುದಕ್ಕೆ ನೀವು ಏಕೆ ನಿಮ್ಮ ಪ್ರಧಾನ ಕಾರ್ಯದರ್ಶಿಯವರಿಗೆ ಹೇಳುತ್ತಿಲ್ಲ ಇದೇನಿದು ?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಬೋಪಯ್ಯನವರಿಗೆ ಸಮಸ್ಯೆ ಪರಿಹಾರವಾಗಬೇಕೆ ಅಥವಾ ಯಾರೋ ಒಬ್ಬರು DC ಹೇಳಿದ್ದು ಕೇಳಿಕೊಂಡು ಇರಬೇಕೆ ?

ಶ್ರೀ ಕೆ.ಜಿ.ಬೋಪಯ್ಯ : ಸಮಸ್ಯೆ ಪರಿಹಾರ ಆಗದೇ ಇರುವುದಕ್ಕೆ ನಾನು ಇಲ್ಲಿ ಪ್ರಸ್ತಾಪಿಸಿದ್ದೇನೆ,

(ಗೊಂದಲ)

ಅಧ್ಯಕ್ಷರು : ಅವರು ಏನು ಹೇಳುತ್ತಾರೆ ಕೇಳೋಣ ತಾಳಿ.

ಶ್ರೀ ಕೆ.ಜಿ. ಬೋಪಯ್ಯ: ಮೊನ್ನೆ ಇವರು ಬಂದಾಗಲೂ ನಮ್ಮನ್ನೆಲ್ಲಾ meeting ಕರೆದರು. ಅಲ್ಲಿಯೂ ಹೇಳಿದೆ. ಹಿಂದಿನ ಉಸ್ತುವಾರಿ ಸಚಿವರ ಹತ್ತಿರವೂ ಹೇಳಿದೆ. ನೀವೇನೂ ಮಾಡಿಲ್ಲ, 26–09–2013 ರ ಇದಕ್ಕೆ clarification ಕೊಟ್ಟಿದ್ದರೆ ಅದರ ಪ್ರತಿ ಕೊಡಿ.

ಅಧ್ಯಕ್ಷರು : ಅವರು ಏನು ಹೇಳುತ್ತಾರೆ ಸ್ವಲ್ಪ ಕೇಳಿ.

ಶ್ರೀ ಕೆ.ಜೆ. ಜಾರ್ಜ್ : clarification ಕೊಡುವ ಅಗತ್ಯವಿಲ್ಲ.

ಶ್ರೀ ಕೆ.ಜಿ. ಬೋಪಯ್ಯ : ಏಕಿಲ್ಲ? ಹಾಗಾದರೆ file ನ್ನು ಕ್ಲಿಯರ್ ಮಾಡಿಸಿ

ಶ್ರೀ ಕೆ.ಜೆ. ಜಾರ್ಜ್: ಒಂದು ನಿಮಿಷ ಇಲ್ಲಿ ಕೇಳಿ.

ಶ್ರೀ ಕೆ.ಜಿ. ಬೋಪಯ್ಯ : File ನ್ನು clear ಮಾಡಿಸಿ

ಅಧ್ಯಕ್ಷರು : ಇದೇನು ದೊಡ್ಡ ವಿಷಯವೇ ದೇವರೆ ?

ಶ್ರೀ ಕೆ.ಜಿ. ಬೋಪಯ್ಯ : ಎಷ್ಟು pending ಇದೆ ಎಂದು ನೀವು ವರದಿ ತರಿಸಿ. ಏಕೆ ಹೀಗೆ ?

ಅಧ್ಯಕ್ಷರು : Home Minister ರವರೆ, D.C. ಗೆ ಸ್ವಲ್ಪ ಉಗಿದು ಸರಿಯಾಗಿ ಹೇಳಿ.

ಶ್ರೀ ಕೆ.ಜಿ. ಬೋಪಯ್ಯ : ಎಲ್ಲ Naxalites ಆಗುತ್ತಾರೆ ನಿಮ್ಮ ಕಾನೂನುಗಳಿಂದ,

ಅಧ್ಯಕ್ಷರು : What is this all ?

(ಗೊಂದಲ)

ಅಧ್ಯಕ್ಷರು : ಅವರು ಏನು ಹೇಳುತ್ತಾರೆ ಕೇಳಿ, ಒಂದು ನಿಮಿಷ ಸುಮ್ಮನಿರಿ.

ಶ್ರೀ ಕೆ.ಜೆ. ಜಾರ್ಜ್ : ಅವರು ಸಭಾಧ್ಯಕ್ಷರಾಗಿದ್ದವರು ಅವರ ಪ್ರಶ್ನೆ ಕೇಳಿದ ಮೇಲೆ ನಮ್ಮ ಉತ್ತರವನ್ನು ಅವರು ಸ್ವಲ್ಪ ಕೇಳಬೇಕು.

ಶ್ರೀ ಕೆ.ಜಿ. ಬೋಪಯ್ಯ : ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಕೆ.ಜೆ. ಜಾರ್ಜ್: ನಾನು ಈಗ ಅವರಿಗೆ ತಮ್ಮ ಮೂಲಕ ಗೃಹ ಸಚಿವರಾಗಿ ಭರವಸೆ ಕೊಡುತ್ತಿದ್ದೇನೆ. ಯಾರು ಜಮ್ಮಾ ಹಿಡುವಳಿದಾರರು ಇದ್ದಾರೆ, ಕೊಡಗಿನ ಮೂಲ ನಿವಾಸಿಗಳಿಗೆ ಈ ಮೊದಲೇನು 1962 ರಲ್ಲಿ order ಮಾಡಿದ್ದಾರೆ ಅದೇ ಪ್ರಕಾರ ಇಂದು ಸಹ gun ವಿಚಾರದಲ್ಲಿ exemption ಕೊಡುತ್ತೇವೆ. ಅಲ್ಲಿ ಏನು ಇದೆ ಎಂದರೆ, ದೃಡೀಕರಣ ಪತ್ರ ಎಂದರೆ, ಅವರು ಜಮ್ಮಾ ಎಂದು ಅಥವಾ ಮೂಲ ನಿವಾಸಿಗಳೆಂದು ಅದಕ್ಕೆ ಒಂದು record ಕೊಡಬೇಕಾಗಿದೆ. ನಾನು DC ಗೆ ಹೇಳಿದ್ದೇನೆ. ಅದನ್ನು ಯಾವುದೇ ರೀತಿಯಿಂದಲೂ ಯಾವ DC ಯೂ ಕೂಡ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೆಂದು ತಮ್ಮ ಮೂಲಕ ಅವರಿಗೆ ಭರವಸೆ ಕೊಡುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ : clarification ಗೆ ಉತ್ತರ ಕೊಡಲಿಲ್ಲವಲ್ಲ.

ಅಧ್ಯಕ್ಷರು : ಬೋಪಯ್ಯನವರೆ, ಇಲ್ಲಿ ಕೇಳಿ ಮಾನ್ಯ ಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಕೆ.ಜೆ. ಜಾರ್ಜ್ : ನಾನು ಇಲ್ಲಿ ಸ್ಪಷ್ಟವಾಗಿ ಉತ್ತರ ಕೊಟ್ಟ ಮೇಲೆ ಮತ್ತೇನು clarification ನಿಮಗೆ ಬೇಕು? ನೋಡಿ ನೀವು DC ವಿಚಾರ ಮಾತನಾಡುತ್ತೀರಾ?

ಶ್ರೀ ಕೆ.ಜಿ. ಬೋಪಯ್ಯ : ಅವರು ಸರ್ಕಾರಕ್ಕೆ ಬರೆದಿರುವ ಪತ್ರದ ಆಧಾರದ ಮೇಲೆ ಮಾತನಾಡುತ್ತಿರುವುದು.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನೋಡಿ ನಾನು ಅವರಿಗೆ ನೇರವಾಗಿ ಹೇಳುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ : ಹಾಗಾದರೆ 100 files pending ಇದೆ ಯಾವಾಗ clear ಮಾಡಿಸುತ್ತೀರಿ?

ಶ್ರೀ ಕೆ.ಜೆ. ಜಾರ್ಜ್: ಅವರಿಗೆ direction ಕೊಟ್ಟಿದ್ದೇನೆ. pending ಇರುವುದು ಏಕೆಂದರೆ, ದೃಢೀಕರಣ ಪತ್ರ ಕೊಡದೇ ಇರುವುದರಿಂದ ಅಲ್ಲಿ pending ಇದೆ.

ಶ್ರೀ ಕೆ.ಜಿ. ಬೋಪಯ್ಯ : ನಾವು ದೃಢೀಕರಣ ಪತ್ರವನ್ನೇ ಕೇಳುತ್ತಿರುವುದು.

ಅಧ್ಯಕ್ಷರು: ಆಯಿತು ಬಿಡಿ, ಏಕೆ ಹೀಗೆ ಗಡಿಬಿಡಿ ಮಾಡುತ್ತೀರಿ?

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ : ಅಲ್ಲಿ procedure ಏನು ಇದೆ ಎಂದರೆ, exepmtion ಗೆ apply ಮಾಡುವವರು ಕೊಡವರಾದರೆ ಕೊಡವ ಎನ್ನುವ certificate ಕೊಡುತ್ತಾರೆ.

ಅಧ್ಯಕ್ಷರು: ಅವನ ಮುಖ ನೋಡಿದರೆ ಇವನು ಕೊಡವ ಎಂದು ಗೊತ್ತಾಗುತ್ತದೆ.

ಶ್ರೀ ಕೆ.ಜಿ. ಬೋಪಯ್ಯ : ಜಮ್ಮಾ holder ಎಂದು RTC ಆಧಾರದ ಮೇಲೆ ಕೊಡುತ್ತಾರೆ. ಆದರೆ, ಈ clarification ಬರೆದುಕೊಂಡು ಎಲ್ಲಾ pending ಇಟ್ಟಿದ್ದಾರಲ್ಲ.

ಅಧ್ಯಕ್ಷರು: ಆ ರೀತಿ ಮಾಡಬೇಡಿ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ತಾವು ಒಂದು ಕೆಲಸ ಮಾಡಿ. ಮೊದಲಿದ್ದ ರೀತಿಯಲ್ಲಿ ಜಮ್ಮಾ holder ಗೆ ಮತ್ತು ಮೂಲ ನಿವಾಸಿಗಳಿಗೆ ಕೊಡಲಾಗುವುದು ಎಂದು ಉತ್ತರ ಕೊಟ್ಟು ಬಿಡಿ ಸಾಕು, ಅಲ್ಲಿಗೆ ಮುಕ್ತಾಯ. ಈ ಹಿಂದೆ ಕೊಟ್ಟಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ : ಈಗ ಕೊಡುತ್ತಿಲ್ಲವಲ್ಲ ?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಅಪ್ಪಚ್ಚುರವರೆ, ನಾನು ಗೃಹ ಸಚಿವನಾಗಿ ಸದನದಲ್ಲಿ ಉತ್ತರ ಕೊಡುತ್ತಿದ್ದೇನೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಹಿಂದೆ ಇದ್ದ ರೀತಿಯಲ್ಲಿ ಕೊಡಲಾಗುವುದು ಎಂದು ಹೇಳಿಬಿಡಿ.

ಅಧ್ಯಕ್ಷರು: ಅವರು direction ಕೊಡುತ್ತೇನೆಂದು ಹೇಳಿದ್ದಾರೆ.ಸಾಕು ಬಿಡಿ.

ಶ್ರೀ ಕೆ.ಜೆ. ಜಾರ್ಜ್: ನಾನು ಸದನದಲ್ಲಿ ಗೃಹ ಸಚಿವರಾಗಿ ಜವಾಬ್ದಾರಿಯಿಂದ ಉತ್ತರ ಕೊಡುತ್ತಿದ್ದೇನೆ.

ಶ್ರೀ ಕೆ.ಜಿ. ಬೋಪಯ್ಯ : ನೀವು ಉತ್ತರ ಕೊಡುತ್ತಿರುವುದು ಇದು ಮೂರನೇ ಬಾರಿ. ಆದರೂ ಏನೂ ಆಗಿಲ್ಲ.

ಅಧ್ಯಕ್ಷರು: ಇದು ಆಗದೇ ಇದ್ದರೆ ನೀವು privilege motion move ಮಾಡಿ.

ಶ್ರೀ ಕೆ.ಜಿ. ಬೋಪಯ್ಯ : ಈ ತಿಂಗಳ ಕೊನೆಯವರೆಗೆ ಆ file ಗಳು clear ಆಗದೇ ಹೋದರೆ ನಾನು privilege motion move ಮಾಡುತ್ತೇನೆ.

ಅಧ್ಯಕ್ಷರು: OK

ಶ್ರೀ ಕೆ.ಜೆ. ಜಾರ್ಜ್: ಇವರು ಹೇಳಿದರೆ ಒಪ್ಪುವುದಕ್ಕೆ ಆಗುವುದಿಲ್ಲ. ನಾನು ಹೇಳುತ್ತಿರುವುದು ಕೊಡಗಿನ ಮೂಲ ನಿವಾಸಿಗಳಿಗೆ, ಜಮ್ಮಾ ಹಿಡುವಳಿದಾರರಿಗೆ,

ಅಧ್ಯಕ್ಷರು : ನಾನು ಬೇರೆ ಏನೂ ಕೇಳುತ್ತಿಲ್ಲ. ಕೇಳುವ ಅವಶ್ಯಕತೆಯೂ ಇಲ್ಲ.

ಶ್ರೀ ಕೆ.ಜೆ. ಜಾರ್ಜ್: ಜಮ್ಮಾ holders ಗೆ ಮತ್ತು ಮೂಲ ನಿವಾಸಿಗಳಿಗೆ 1962 ರ order ಪ್ರಕಾರ exemption ಇದೆ.

ಶ್ರೀ ಕೆ.ಜಿ. ಬೋಪಯ್ಯ : ನಾನು ಅದನ್ನೇ ಕೇಳುತ್ತಿರುವುದು.

ಅಧ್ಯಕ್ಷರು : ಏಕೆ ಹೀಗೆ ಮಾಡುತ್ತೀರಿ ?

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಅದನ್ನೇ ಮುಂದುವರಿಸುತ್ತೇವೆಂದು ಹೇಳಿದರೆ ಸಾಕು. ಅದನ್ನು writing ನಲ್ಲಿ ಕಳುಹಿಸಿ ಕೊಟ್ಟು ಬಿಡಿ.

ಅಧ್ಯಕ್ಷರು : ಸ್ವಲ್ಪ ತಾಳಿ ಏಕೆ ಹೀಗೆ ಮಾಡುತ್ತೀರಿ ?

ಶ್ರೀ ಬಿ. ರಮಾನಾಥ ರೈ : ಕೋವಿ ಕೊಟ್ಟರೆ ಶಿಕಾರಿ ಮಾಡಿದರೆ ಹೇಗೆ ?

ಶ್ರೀ ಕೆ.ಜಿ. ಬೋಪಯ್ಯ : ಶಿಕಾರಿ ಮಾಡುವುದು ಒಂದು ಕಡೆ ಇರಲಿ, ನೀವು ಬೇಕಾದರೆ ಆನೆಗಳನ್ನು ಕೊಲ್ಲಿ.

ಶ್ರೀ ಬಿ. ರಮಾನಾಥ ರೈ : ನನ್ನ ವಿನಂತಿ ಇಷ್ಟೇ, ಕೋವಿ ಕೊಡಲಿ ಬೇಕಾದರೆ ಕಾಡು ಪ್ರಾಣಿಗಳನ್ನು ಸಾಯಿಸಬೇಕಾಗಿಲ್ಲ

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ : ನೋಡಿ ಕೋವಿ ಶಿಕಾರಿಗಲ್ಲ. ನಮ್ಮಲ್ಲಿ ಹುಟ್ಟಿದಾಗಲೂ ಗುಂಡು ಹೊಡೆಯುತ್ತೇವೆ. ಸತ್ತಾಗಲೂ ಗುಂಡು ಹೊಡೆಯುತ್ತೇವೆ. ನೀವ್ಯಾಕೆ ಶಿಕಾರಿ ಎಂದು ನಮ್ಮ ಪದ್ಧತಿಗೆ against ಆಗಿ ಮಾತನಾಡುತ್ತೀರಿ? ಅವರು ಶಿಕಾರಿಗೆ ಎಂದು ಹೇಳುವುದು ಸರಿಯಲ್ಲ. ಸತ್ತರೆ ಇಡೀ ಊರಿಗೆ ಗೊತ್ತಾಗಲಿ ಎಂದು ಜೋಡಿ ಗುಂಡು ಹೊಡೆಯುತ್ತೇವೆ. ಅದಕ್ಕೆ ನೀವು ಏಕೆ ನಮ್ಮ ಪದ್ಧತಿಗೆ ಅಡ್ಡಿಪಡಿಸುತ್ತೀರಿ? ಅವರು ಸುಮ್ಮ ಸುಮ್ಮನೆ ಏಕೆ ಮಾತನಾಡಬೇಕು ?

(ಗೊಂದಲ)

ಶ್ರೀ ಬಿ. ರಮಾನಾಥ್ ರೈ : ಅವರು ಕಾಡುಪ್ರಾಣಿಗಳಿಗೆ ಗುಂಡು ಹೊಡೆಯಬೇಡಿ ಎಂದು ಹೇಳಿದೆ. ಇದರಲ್ಲಿ ಏನು ತಪ್ಪಿದೆ ?

(ಗೊಂದಲ)

ಅಧ್ಯಕ್ಷರು : ಪ್ರಾಣಿಗಳಿಗೂ ಹೊಡೆಯಬೇಕು. ಎಲ್ಲದಕ್ಕೂ ಹೊಡೆಯಬೇಕು ಆಯಿತು ಬಿಡಿ.

(ಗೊಂದಲ)

ಶ್ರೀ ಬಿ. ರಮಾನಾಥ್ ರೈ : ನಾನು ಪ್ರಾಮಾಣಿಕವಾಗಿ ಹೇಳಿದೆ. ಅವರಿಗೆ ಕೋವಿ ಕೊಡಿ.

(ಗೊಂದಲ)

ಅಧ್ಯಕ್ಷರು : ಈ ವಿಷಯ ಎಲ್ಲೆಲ್ಲಿಗೋ ಹೋಗುತ್ತಿದೆ. ಆಯಿತು, ಸಾಕು ಬಿಡಿ. ಬೋಪಯ್ಯನವರೆ ಅವರು ಹೇಳಿದರೆ ಸಾಕು ಬಿಡಿ.

ಶ್ರೀ ಕೆ.ಜಿ. ಬೋಪಯ್ಯ : ಅವರು file clear ಮಾಡದಿದ್ದರೆ ನಾನು privilege move ಮಾಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್: ನಾನು ಸ್ಪಷ್ಟೀಕರಣ ಕೊಡುವುದಕ್ಕೆ ಬಯಸುತ್ತೇನೆ. ಅವರು ಹೇಳಿದ ಹಾಗೆ 200–300 applications ಗಳಿಗೆ ಅವರು ದೃಢೀಕರಣ ಪತ್ರ ಕೊಟ್ಟರೆ ಅದನ್ನು dispose ಮಾಡುವಂತಹ ಕೆಲಸ ಮಾಡುತ್ತೇನೆ. ಎಲ್ಲಾ application ಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ದೃಢೀಕರಣ ಪತ್ರ ಯಾರು ಕೊಡುತ್ತಾರೆ ? ಮೂಲ ನಿವಾಸಿಗಳು ಯಾರಿದ್ದಾರೆ ? ಜಮ್ಮಾ holders ಯಾರು ಇದ್ದಾರೆ? ಅವರಿಗೆ certificate ಕೊಡುವ ಕೆಲಸ ಮಾಡುತ್ತೇನೆ.

ಅಧ್ಯಕ್ಷರು : ಗೃಹ ಸಚಿವರೇ ಇಲ್ಲಿ ಕೇಳಿ. ಇದು 1962 ರಲ್ಲಿ ಹೊರಡಿಸಿರುವ order. ಈ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ clarification ಕೇಳುವುದು. ಇದು headlong ಅಲ್ಲವೇ, ಇದೇನು ನಿನ್ನೆ ಮೊನ್ನೆ ಆಗಿರುವುದೇ ?

ಶ್ರೀ ಕೆ.ಜೆ. ಜಾರ್ಜ್: ಹೊಸ ಹೊಸ ಜಿಲ್ಲಾಧಿಕಾರಿಗಳು ಬರುತ್ತಾರೆ. ಅವರು clarification ಕೇಳಿದರೆ ಏನೂ ತಪ್ಪಿಲ್ಲ.

ಅಧ್ಯಕ್ಷರು : No. Not necessary. ಹಾಗಾದರೆ ಇಲ್ಲಿ ಮುಖ್ಯಮಂತ್ರಿಗಳು ಪಾರದರ್ಶಕ ಆಡಳಿತ ಎಂದು ಏಕೆ ಹೇಳಿದ್ದಾರೆ?

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ದೃಢೀಕರಣ ಪತ್ರ ಯಾರು ಕೊಡುವುದು? Revenue Department.

ಅಧ್ಯಕ್ಷರು : ತಹಶೀಲ್ದಾರ್.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : Licence ಕೊಡುವವರು Revenue Department.

(ಗೊಂದಲ)

ಶ್ರೀ ಕೆ. ಜಿ. ಬೋಪಯ್ಯ : ಇಲ್ಲಿ ಸಂಖ್ಯೆ ಜಾಸ್ತಿಯಾಗುತ್ತದೆ, ಕೊಡಬಹುದೇ ಎಂದು ಕೇಳಿದರೆ ನೀವು ಜಮ್ಮಾ ಕೊಡುತ್ತೀರಾ ?

ಶ್ರೀ ಕೆ.ಜೆ. ಜಾರ್ಜ್: ನಿಮ್ಮ ಉದ್ದೇಶ ನನಗೆ ಗೊತ್ತಿಲ್ಲ. ಇಷ್ಟು ನೇರವಾಗಿ ನಾನು ಸ್ಪಷ್ಟೀಕರಣ ಮಾಡಿದ ಮೇಲೂ ನೀವು ಅದನ್ನು ಒಪ್ಪಿಕೊಳ್ಳದಿದ್ದರೆ ನಾವೇನು ಮಾಡುವುದಕ್ಕಾಗುತ್ತದೆ ?

ಶ್ರೀ ಕೆ.ಜಿ. ಬೋಪಯ್ಯ : ಈ ಪತ್ರಕ್ಕೆ ನಾನು ಸ್ಪಷ್ಟೀಕರಣ ಕೇಳುತ್ತಿರುವುದು.

ಶ್ರೀ ಕೆ.ಜೆ. ಜಾರ್ಜ್: ಅದನ್ನು ಬಿಟ್ಟು ಬಿಡಿ. ನಾನು ಹೇಳುತ್ತಿರುವುದು ಅದನ್ನು ಹೊರತುಪಡಿಸಿ.

ಶ್ರೀ ಕೆ.ಜಿ. ಬೋಪಯ್ಯ : 31 ನೇ ತಾರೀಖು ಕಳೆದ ಮೇಲೆ ಆ application pending ಇದ್ದರೆ ನಾನು privilege ಹಾಕುತ್ತೇನೆ.

ಶ್ರೀ ಕೆ.ಜೆ. ಜಾರ್ಜ್: Ok

ಅಧ್ಯಕ್ಷರು : ಆಯಿತು ಬಿಡಿ. Next ಎಸ್ ಎನ್. ಸುಬ್ಬಾರೆಡ್ಡಿಯವರು ಅವರು ಇಲ್ಲ. ಈಗ ಸದನವನ್ನು ಮುಂದೂಡಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಪುನಃ ಇಲ್ಲಿ ಸೇರುತ್ತದೆ.

(ಸದನವು ಸಂಜೆ 6 ಗಂಟೆ 58 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 25 ನೇ ಜೂನ್ 2014 ರಂದು ಬುಧವಾರ ಬೆಳಿಗ್ಗೆ 11–00 ಗಂಟೆಗೆ ಸಭೆ ಸೇರುವಂತೆ ನಿಶ್ಚಯಿಸಿತು)

ಅನುಬಂಧ–1

ಆರಾಧನಾ ಯೋಜನೆ

68 (245) **ಶ್ರೀ ಯು.ಬಿ. ಬಣಕಾರ್:–** ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

(ಅ) 2013–14ನೇ ಸಾಲಿಗೆ ಆರಾಧನಾ ಯೋಜನೆಯನ್ನು ತಾಲ್ಲೂಕುವಾರು ನಿಗಧಿಪಡಿಸಿದ ಗುರಿ ಎಷ್ಟು ?

(ಆ) ದಿನಾಂಕ 31.03.2014 ರ ಅಂತ್ಯಕ್ಕೆ ಪ್ರತಿ ತಾಲ್ಲೂಕುವಾರು ಬಿಡುಗಡೆ ಮಾಡಿದ ಹಣವೆಷ್ಟು ; ಎಂದು ಬಿಡುಗಡೆ ಮಾಡಿದೆ ; ಖರ್ಚಾದ ಮೊತ್ತವೆಷ್ಟು ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):

(ಅ) 2013–14 ನೇ ಸಾಲಿನಲ್ಲಿ ಆರಾಧನಾ ಯೋಜನೆಯನ್ನು ಪ್ರತ್ಯೇಕವಾಗಿ ತಾಲ್ಲೂಕುವಾರು ನಿಗಧಿಪಡಿಸಿರುವುದಿಲ್ಲ. ಆರಾಧನಾ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಗಳಿಗೆ ಈ ಕೆಳಕಂಡಂತೆ ಒಟ್ಟು ₹.3360.00 ಲಕ್ಷಗಳ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಿದ್ದು, ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 15.00 ಲಕ್ಷದಂತೆ ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗಿರುತ್ತದೆ.

ಯೋಜನೆ	ನಿಗದಿಪಡಿಸಿರುವ ಮೊತ್ತ
ಆರಾಧನಾ	**1054.70**
ವಿಶೇಷ ಘಟಕ ಯೋಜನೆ	**1905.30**
ಗಿರಿಜನ ಉಪಯೋಜನೆ	**400.00**
ಒಟ್ಟು	**3360.00**